# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)
## ರಾಜ್ಯ ಸಮಿತಿ, ಕರ್ನಾಟಕ

**ಮಾನ್ಯ ಸಂಪಾದಕರೆ, ಮಾಧ್ಯಮ ಪ್ರತಿನಿಧಿಗಳೆ,**

**ಕ್ರಾಂತಿಕಾರಿ ಶುಭಾಶಯಗಳು.**

ಚುನಾವಣೆ ಮತ್ತು ನಂತರದ ಬೆಳವಣಿಗೆಗಳು ಹೊಸ ಸರ್ಕಾರದ ರಚನೆಯ ಕುರಿತು ನಮ್ಮ ಪ್ರಕಟಣೆಯನ್ನು ಬಿಡುಗಡೆ ಮಾಡುತ್ತಿದ್ದೇವೆ. ತಾವುಗಳು ಇದನ್ನು ಪರಿಗಣಿಸಿ ಆದ್ಯತೆ ನೀಡಿ ಪ್ರಕಟಿಸಬೇಕೆಂದು ಈ ಮೂಲಕ ಮನವಿ ಮಾಡುತ್ತಿದ್ದೇವೆ.

**ಹೋರಾಟದಲ್ಲಿ ತಮ್ಮೊಂದಿಗೆ,**

**ಗಂಗಾಧರ**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**30 ಮೇ, 2005**

ಎರಡು ಸಮ್ಮಿಶ್ರ ಸರ್ಕಾರಗಳು ಉರುಳಿ ರಾಷ್ಟ್ರಪತಿ ಆಳ್ವಿಕೆ ಹೇರಲ್ಪಟ್ಟು, ಚುನಾವಣೆಗಳು ಘೋಷಣೆಯಾಗಿ ಇದೀಗ ಚುನಾವಣೆ ಮುಗಿದು ಹೊಸ ಸರ್ಕಾರ ರಚನೆಯಾಗಿದೆ. ಚುನಾವಣಾ ಆಯೋಗ ಬಹಳ ಕಟ್ಟುನಿಟ್ಟಿನಿಂದ ಈ ಚುನಾವಣೆ ನಡೆಸಿದಂತೆ ಪ್ರಚಾರ ನಡೆದಿದೆ. ಆದರೆ ವಾಸ್ತವ ಬೇರೆಯೇ ಇದೆ. ಜನರಲ್ಲಿ ದಿನೇದಿನೇ ಕಳೆದುಹೋಗುತ್ತಿರುವ ಈ ಚುನಾವಣಾ ನಾಟಕಗಳ ಬಗೆಗಿನ ಭರವಸೆಗಳನ್ನು ಹೇಗಾದರೂ ಉಳಿಸಿಕೊಂಡು, ಪ್ರಜಾತಾಂತ್ರಿಕತೆಯ ಸೋಗಲಾಡಿತನದಡಿ ಜನರನ್ನು ಭ್ರಮೆಯಲ್ಲಿಡುವ ಆಳುವ ವರ್ಗಗಳ ಪ್ರಯತ್ನದ ಭಾಗವಾಗಿ ಚನಾವಣಾ ಆಯೋಗ ಬಹಳ ಕಟ್ಟುನಿಟ್ಟೆಂಬಂತೆ ಬಿಂಬಿಸಲ್ಪಟ್ಟಿತು. ಆದರೆ ಹಣ, ಹೆಂಡ, ಅಕ್ರಮಗಳು ಹಿಂದೆಂದಿಗಿಂತಲೂ ಹೆಚ್ಚಿನ ಮಟ್ಟದಲ್ಲಿ ನಡೆದವು. ಕೋಟ್ಯಾಂತರ ರೂಪಾಯಿಗಳ ಕಳ್ಳ ಹಣವನ್ನು ವ್ಯಾಪಕವಾಗಿ ಎಲ್ಲಾ ಪಕ್ಷಗಳೂ ಹಂಚಿವೆ. ಜನರಿಗೆ ಹೆಂಡ ಕುಡಿಸಿ ಮತ್ತಿನಲ್ಲಿಟ್ಟು, ಮತ ಪಡೆಯಲು ಸಾವಿರಾರು ಕಳ್ಳಭಟ್ಟಿ ಕೇಂದ್ರಗಳನ್ನು ತೆರೆಯಲಾಯಿತು. ಡಿಸ್ಟಿಲರಿಗಳಲ್ಲಿ ಕಳಪೆ ಮಟ್ಟದ ಮದ್ಯವನ್ನು ಇದಕ್ಕಾಗೇ ವಿಶೇಷವಾಗಿ ತಯಾರಿಸಲಾಯಿತು. ಇದೆಲ್ಲಾ ಬಹಿರಂಗ ರಹಸ್ಯದಂತೆ ನಡೆದವು. ನೂರಾರು ಕಳ್ಳಭಟ್ಟಿ ಕೇಂದ್ರಗಳನ್ನು ವಶಪಡಿಸಿಕೊಂಡ, ಸಾವಿರಾರು ಲೀಟರ್ ಕಳ್ಳಭಟ್ಟಿ ಹಾಗೂ ಟನ್‌ಗಟ್ಟಲೆ ಕೊಳೆಯನ್ನು ನಾಶಪಡಿಸಿದ ವರದಿಗಳು, 50 ಕೋಟಿಗೂ ಹೆಚ್ಚು ಹಣ ವಶಪಡಿಸಿಕೊಂಡ ವರದಿಗಳು ಮಾಧ್ಯಮಗಳಲ್ಲಿ ದೊಡ್ಡಮಟ್ಟದ ಪ್ರಚಾರ ಪಡೆದುಕೊಂಡವು. ಆದರೆ ವಾಸ್ತವದಲ್ಲಿ ಈ ಚುನಾವಣೆಯಲ್ಲೂ ಇವುಗಳೇ ಪ್ರಧಾನ ಪಾತ್ರ ವಹಿಸಿದವು. ವ್ಯಾಪಕ ಹಣ ಹಂಚಿಕೆ ಆಗಿರುವುದನ್ನು ಚುನಾವಣಾ ಆಯೋಗವೇ ಹೇಳಿದೆ. ಕೊಳೆಗೇರಿಗಳಲ್ಲಿರುವ, ಬಡತನದಲ್ಲಿ ನೊಂದು ನಲುಗುತ್ತಿರುವ ಯುವಕರನ್ನು ಹಣದ ಆಮಿಷ ಒಡ್ಡಿ ಚುನಾವಣಾ ಪ್ರಚಾರ, ಹೆಂಡ ಸಾರಾಯಿ ಹಂಚಿಕೆ, ಹಣ ಹಂಚಿಕೆ ಇತ್ಯಾದಿಗಳಲ್ಲಿ ತೊಡಗಿಸಿಕೊಳ್ಳಲಾಯಿತು. ಇವರುಗಳಲ್ಲಿ ಬಹುತೇಕರು, ಹೊಸ ಸರ್ಕಾರ ಬಂದು ತಮ್ಮ ಹಾಗೂ ನಾಡಿನ ಸಮಸ್ಯೆಗಳನ್ನು ಪ್ರಾಮಾಣಿಕ ಕಾಳಜಿಯಿಂದ ಬಗೆಹರಿಸುವತ್ತ ಗಮನ ಹರಿಸುತ್ತದೆಂಬ ಭರವಸೆಗಳಿಂದ ಚುನಾವಣೆಗಾಗಿ ದುಡಿದವರಲ್ಲ. ಆ ಸಮಯದಲ್ಲಿ ಸಿಕ್ಕಷ್ಟು ಕಾಸು ಸಂಪಾದಿಸುವ ಗುರಿಯೊಂದಿಗೆ ತಮಗನುಕೂಲವಾದ ಪಕ್ಷದ ಜೊತೆ ಚುನಾವಣಾ ಪ್ರಕ್ರಿಯೆಗಳಲ್ಲಿ ತೊಡಗಿದ್ದರು. ತಮ್ಮದೇ ಪ್ರತಿನಿಧಿಗಳನ್ನು ಆರಿಸಿ ತಮ್ಮದೇ ಪ್ರಭುತ್ವವನ್ನು ಸ್ಥಾಪಿಸಬಹುದೆಂಬ ಉತ್ಸಾಹ ಕೂಡ ಇವರಲ್ಲಿರಲಿಲ್ಲ. ಈ ಕಪಟ ಚುನಾವಣಾ ನಾಟಕದಲ್ಲಿ ಆಳುವ ವರ್ಗಗಳು ಮತ್ತವುಗಳ ಪಕ್ಷಗಳು ದಾಳಗಳಂತೆ ಈ ಜನರನ್ನು ಬಳಸಿಕೊಂಡರು. ಈ ಚುನಾವಣೆಯಲ್ಲಿ ಹಿಂದೆಂದೂ ಇಲ್ಲದಷ್ಟು ಕಳ್ಳಭಟ್ಟಿ ಸಾವುಗಳು (ಕಗ್ಗೊಲೆಗಳು) ನಡೆದವು. ಸಾವಿರಾರು ಜನರಿಗೆ ಕಳ್ಳಭಟ್ಟಿ ಕುಡಿಸಿ ಹಾಸಿಗೆ ಹಿಡಿಸಿದರು. ಸುಳ್ಳು ಭರವಸೆಗಳ ಮಹಾಪೂರವನ್ನೇ ಹರಿಸಲಾಯಿತು. ಲಕ್ಷಾಂತರ ಪೊಲೀಸ್ ಹಾಗೂ ಅರೆ-ಮಿಲಿಟರಿ ಪಡೆಗಳನ್ನು ಬಳಸಲಾಯಿತು. ಶಾಂತಿಯುತವಾಗಿ! ಮತದಾನ ನಡೆಯಿತೆಂದು ಬಿಂಬಿಸಲಾಯಿತು. ನೂರಾರು ಜನ ಸತ್ತು ಶವಗಳಾಗಿ ಮಲಗಿದ್ದು, ಸಾವಿರಾರು ಜನರ ಆರೋಗ್ಯ ಕೆಡಿಸಿ ಹಾಸಿಗೆ ಹಿಡಿಸಿದ್ದು, ಸಾವಿಗೀಡಾದವರ ಕುಟುಂಬಗಳನ್ನು ಬೀದಿಪಾಲು ಮಾಡಿದ್ದು ಶಾಂತಿಯ ದ್ಯೋತಕವೇ? ಹಣ, ಹೆಂಡ, ಸಾರಾಯಿ ಹಂಚಿ ಬೆದರಿಕೆ ಒಡ್ಡಿ ಮತ ನೀಡುವಂತೆ ಮಾಡಿದ್ದು ಶಾಂತಿಯುತವೆ?! ಕಂಡಲ್ಲಿ ಗುಂಡಿನ ಆದೇಶ ನೀಡಿದ್ದು ಮುಕ್ತ ವಾತಾವರಣಕ್ಕಾಗಿಯೇ? ಮತದಾನ ಮಾಡದಿದ್ದಲ್ಲಿ ಪಡಿತರ ಚೀಟಿಯಾಗಲಿ (ಅದು ಈಗಲೂ ಇಲ್ಲ), ಯಾವುದೇ ದಾಖಲಾತಿಗಳಾಗಲಿ ಪಡೆಯಲು ಸಾಧ್ಯವಿಲ್ಲ ಇತ್ಯಾದಿ ಪ್ರಚಾರ ಮಾಡಿ ಜನರಲ್ಲಿ ಭಯ ಹುಟ್ಟಿಸಿದ್ದು ನ್ಯಾಯಯುತವೆ? ಇವೆಲ್ಲಾ ಪ್ರಜಾತಾಂತ್ರಿಕ ಪ್ರಕ್ರಿಯೆಗಳಾಗಲು ಸಾಧ್ಯವೆ? ಇಂತಹ ಹಲವು ಅಕ್ರಮಗಳು ನಡೆದಿರುವುದು ಕಣ್ಣಿಗೆ ರಾಚುವಂತೆ ಕಾಣುತ್ತಿದ್ದರೂ ಮುಕ್ತವಾಗಿ ಶಾಂತಿಯುತವಾಗಿ ಪ್ರಜಾತಾಂತ್ರಿಕವಾಗಿ ಚುನಾವಣೆಗಳು ನಡೆದು ಹೊಸ ಸರ್ಕಾರವನ್ನು ಚುನಾಯಿಸಲಾಗಿದೆ ಎಂದು ಬಿಂಬಿಸಿದರೆ ಅದು ದ್ರೋಹವಾಗುವುದಿಲ್ಲವೆ? ಇರುವ ವಾಸ್ತವವನ್ನು ಮುಚ್ಚಿಡುವ ಪ್ರಯತ್ನ ಅಲ್ಲವೆ?

ನಾವು ಇದು ಕಪಟ ಚುನಾವಣೆಯೆಂದು ಸಾರಿ, ಬಹಿಷ್ಕಾರಕ್ಕಾಗಿ ಕರ್ನಾಟಕದಾದ್ಯಂತ ಪ್ರಚಾರ ನಡೆಸಿದೆವು. ಚುನಾವಣಾ ನಾಟಕಗಳ ಹಿಂದಿನ ಪೊಳ್ಳುತನ ಹಾಗೂ ಸುಳ್ಳುಗಳನ್ನು ಮೋಸ, ಲೂಟಿ, ಅಕ್ರಮ, ಹಗಲು ದರೋಡೆಯ ನಿಜ ಹೂರಣವನ್ನು ಜನರೆದುರು ತೆರೆದಿಟ್ಟೆವು. ಅದಕ್ಕಾಗಿ ಕರಪತ್ರ, ಭಿತ್ತಿಪತ್ರ, ಬ್ಯಾನರ್‌ಗಳನ್ನು ಹಾಕಿ ಸಭೆಗಳನ್ನು ನಡೆಸಿದೆವು. ಜನರೇ ಹಲವಾರು ಕಡೆಗಳಲ್ಲಿ ಚುನಾವಣಾ ಬಹಿಷ್ಕಾರಕ್ಕೆ ಸ್ವಯಂಪ್ರೇರಿತರಾಗಿಯೂ ಕರೆ ನೀಡಿದರು.

ಆಳುವ ವರ್ಗಗಳ ಕ್ರೂರ ಮೋಸ ವಂಚನೆಯ ರಾಜಕೀಯವನ್ನು ಬಯಲುಗೊಳಿಸಿ ಜನರನ್ನು ಜಾಗೃತಗೊಳಿಸುವ ಉದ್ದೇಶದಿಂದ ನಾವು ಚುನಾವಣಾ ಬಹಿಷ್ಕಾರದ ಕರೆ ನೀಡಿ ಪ್ರಚಾರ ನಡೆಸಿದ್ದೆವು. ನಾವೆಲ್ಲೂ ಜನರಿಗೆ ಮತದಾನ ಬಹಿಷ್ಕಾರಕ್ಕೆ ಬಲವಂತ ಮಾಡಿಲ್ಲ. ಅದು ನಮ್ಮ ಉದ್ದೇಶ ಆಗಿರಲಿಲ್ಲ. ಚುನಾವಣಾ ಬಹಿಷ್ಕಾರ ಈ ಕೂಡಲೇ ಜಾರಿಯಾಗುತ್ತದೆಂಬ ಭ್ರಮೆಯೂ ನಮಗಿರಲಿಲ್ಲ. ಆಳುವ ವರ್ಗಗಳ ಬಂಟರಾದ ಪೊಲೀಸ್ ಹಾಗೂ ಅರೆ-ಸೇನಾಪಡೆಗಳು ಜನರಿಗೆ ಬಂದೂಕಿನ ಮೊನೆ ತೋರಿಸಿ ಬೆದರಿಸಿ ಬಲಾತ್ಕಾರದಿಂದ ಮತ ಚಲಾವಣೆಯಾಗುವಂತೆ ಮಾಡಿದ ಉದಾಹರಣೆಗಳು ಸಾಕಷ್ಟಿವೆ. ಕರ್ನಾಟಕದಲ್ಲೂ ಕ್ರಾಂತಿಕಾರಿ ಚಳುವಳಿ ಇರುವ ಕಡೆ ಜನರಲ್ಲಿ ಭಯ ಮೂಡಿಸಿ ಮತ ಚಲಾಯಿಸುವಂತೆ ಬಲಾತ್ಕಾರ ಮಾಡಿದ್ದಾರೆ. ಕ್ರಾಂತಿಕಾರಿ ಹಾಗೂ ರಾಷ್ಟ್ರೀಯ ವಿಮೋಚನಾ ಹೋರಾಟಗಳಿರುವ ಆಂಧ್ರ, ಬಿಹಾರ, ದಂಡಕಾರಣ್ಯ, ಛತ್ತೀಸ್‌ಗಢ, ಜಾರ್ಖಂಡ್, ಮಣಿಪುರ, ತ್ರಿಪುರ, ಅಸ್ಸಾಂ, ಕಾಶ್ಮೀರಗಳಲ್ಲಿ ಇದನ್ನು ಅವ್ಯಾಹತವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಈ ಹಿಂದೆ ಪಂಜಾಬ್‌ನಲ್ಲಿ ಕೇವಲ ಶೇ. 10ರಷ್ಟು ಜನರು ಮಾತ್ರ ಮತ ಚಲಾಯಿಸಿದ್ದರೂ ಬೇಅಂತ್ ಸಿಂಗ್ ಸರ್ಕಾರವನ್ನು ರಚಿಸಿ ಕೂರಿಸಿದ ಉದಾಹರಣೆ ನಮ್ಮ ಮುಂದಿದೆ. ಅದೇರೀತಿ ಕಾಶ್ಮೀರ ಕೂಡ ಇದೆ. ಆಳುವ

ವರ್ಗಗಳಿಗೆ ತನ್ನ ನಿರಂಕುಶಾಧಿಕಾರ ಚಲಾಯಿಸಲು ಈ ಚುನಾವಣೆ ಎಂಬ ಮುಸುಕು ಹಾಕಿ ಜನರನ್ನು ಮರಳುಗೊಳಿಸುವುದು ಅತ್ಯಗತ್ಯವಾಗಿದೆ. ಅದಕ್ಕಾಗಿ ಅವರು ಏನನ್ನಾದರೂ ಮಾಡುತ್ತಾರೆ. ಏಕೆಂದರೆ ಅವರ ನಿರಂಕುಶಾಧಿಕಾರಕ್ಕೆ ಪ್ರಜಾತಾಂತ್ರಿಕ ಮುದ್ರೆ ಮಾತ್ರ ಬೇಕಾಗಿದೆ ಅಷ್ಟೆ.

ಇಷ್ಟೆಲ್ಲಾ ಅಕ್ರಮಗಳನ್ನು ನಡೆಸಿದ್ದರೂ ಸರಾಸರಿ ಶೇ. 60ರಷ್ಟು ಮಾತ್ರ ಮತ ಚಲಾವಣೆಯಾಗಿದೆ ಎಂಬುದು ಅಧಿಕೃತ ವರದಿ. ಆದರೆ ಅದರಲ್ಲಿ ನಿಜವಾಗಿ ಚಲಾವಣೆಯಾದ ಮತಗಳೆಷ್ಟು ಎಂದು ಲೆಕ್ಕ ಹಾಕಿದಾಗ ಅದು ಶೇ. 35ರಿಂದ 40ನ್ನು ಮೀರುವುದಿಲ್ಲ. ಅದೂ ಕೂಡ ಜನರು ಸ್ವಯಂಪ್ರೇರಣೆಯಿಂದ ಮತ ಹಾಕಿದ್ದಾಗಿರುವುದಿಲ್ಲ. ಅವರನ್ನು ಕಳ್ಳಭಟ್ಟಿಯ ಮತ್ತಿನಲ್ಲಿ ಮುಳುಗಿಸಿ, ಹಣದ ಆಮಿಷ ತೋರಿಸಿ ಬಲ ಪ್ರದರ್ಶನ ಮಾಡಿ ಬೆದರಿಸಿ, ಕುತಂತ್ರ ಮಾಡಿ ಹಾಕಿಸಿಕೊಂಡ ಮತಗಳೇ ಆಗಿರುತ್ತವೆ. ಹಾಗಾಗಿ ಜನರು ವಿವೇಚನೆಯಿಂದ ನೀಡಿದ ಮತಗಳನ್ನು ನೋಡಿದಾಗ ನಮಗೆ ನಿಜವಾದ ರಹಸ್ಯ ಅರ್ಥವಾಗುತ್ತದೆ. ಅಂದರೆ ನಾಡಿನ ಬಹುಸಂಖ್ಯಾತರು ಅಂದರೆ ಸುಮಾರು ಶೇ. 60ಕ್ಕೂ ಹೆಚ್ಚು ಜನರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿರುವುದಿಲ್ಲ. ಭಾಗವಹಿಸಿದ ಶೇ. 35ರಿಂದ ಶೇ. 40ರಷ್ಟು ಜನರು ವಿವೇಚನೆಯಿಂದ ಮತ ನೀಡಿರುವುದಿಲ್ಲ. ಇಂತಹ ಚುನಾವಣೆಯ ಆಧಾರದಲ್ಲಿ ಸರ್ಕಾರ ರಚನೆ ಆದರೆ ಅದು ಪ್ರಜೆಗಳ ಪ್ರಭುತ್ವ ಹೇಗಾಗಲು ಸಾಧ್ಯ? ಕೋಟ್ಯಾಂತರ ಖರ್ಚು ಮಾಡಿ ಕುತಂತ್ರ ನಡೆಸಿ, ಅಧಿಕಾರಕ್ಕೇರುವವರು, ಕೋಟ್ಯಾಂತರ ರೂಪಾಯಿಗಳಿಗೆ ತಮ್ಮನ್ನು ತಾವೇ ಮಾರಿಕೊಂಡಿರುವ ಶಾಸಕರುಗಳು ಜನರ ಪರವಾಗಿ ನಾಡಿನ ಪರವಾಗಿ ಹೇಗೆ ಇರಲು ಸಾಧ್ಯವಾಗುತ್ತದೆ?

ಇಷ್ಟೆಲ್ಲದರ ನಡುವೆಯೂ ಯಾವುದೇ ಪಕ್ಷ ಬಹುಮತ ಗಳಿಸಲು ಸಾಧ್ಯವಾಗಿಲ್ಲ. ಬಿಜೆಪಿ ತನ್ನ ಸಂಖ್ಯಾಬಲವನ್ನು ಗಣನೀಯವಾಗಿ ಹೆಚ್ಚಿಸಿಕೊಂಡಿದ್ದರೂ ಸ್ವಂತ ಬಲದ ಮೇಲೆ ಸರ್ಕಾರ ರಚಿಸಲು ಸಾಧ್ಯವಾಗಿಲ್ಲ. ಬಾಹ್ಯ ಬೆಂಬಲವೇ ಸರ್ಕಾರದ ಅಳಿವು ಉಳಿವಿನ ಪ್ರಧಾನ ಅಂಶವಾಗಿದೆ. ಬಿಜೆಪಿಯೊಳಗಿರುವ ಆಂತರಿಕ ಕಚ್ಚಾಟಗಳು ಈಗ ಮತ್ತಷ್ಟು ಹೆಚ್ಚಾಗಿವೆ. ಮಂತ್ರಿ ಸ್ಥಾನ, ಖಾತೆ ಹಂಚಿಕೆ, ಉಸ್ತುವಾರಿ ಇತ್ಯಾದಿಗಳ ವಿಚಾರದಲ್ಲಿ ಗುಂಪುಗಾರಿಕೆ, ಅಸಮಾಧಾನಗಳು ಹೆಚ್ಚಿವೆ. ಗಣಿ ಮಾಫಿಯಾ ಹಿಡಿತ ಹೆಚ್ಚಾಗುತ್ತಿದೆ. ಭೂಮಾಫಿಯಾವು ಸರ್ಕಾರದೊಳಗೆ ತೂರಿ ಸದೃಢೀಕರಣಗೊಳ್ಳುತ್ತಿದೆ. ಚುನಾವಣಾ ಪ್ರಚಾರದ ಸಮಯದಲ್ಲಿ ಹಿಂದೂ ಫ್ಯಾಸಿಸಂ ವಿಚಾರಗಳನ್ನು ಮುಂದಕ್ಕೆ ತರದೇ ಚುನಾವಣಾ ನಂತರ ಸಂಘಪರಿವಾರ ಹಾಗೂ ಹಿಂದೂ ಫ್ಯಾಸಿಸಂ ಅನ್ನು ಮುನ್ನೆಲೆಗೆ ತರುವ ಕೆಲಸ ನಡೆದಿದೆ. ಜನರ ಕಣ್ಣಿಗೆ ಮಣ್ಣೆರಚಲು ಅಲ್ಪಸಂಖ್ಯಾತರಿಗೂ ಸಚಿವ ಸಂಪುಟದಲ್ಲಿ ಸ್ಥಾನ ಕಲ್ಪಿಸಲಾಗಿದೆ. ಉಳಿದಂತೆ ಸರ್ಕಾರದಲ್ಲಿ ಯಡಿಯೂರಪ್ಪ, ಅನಂತಕುಮಾರ್ ಬಣಗಳ ಪ್ರಾಬಲ್ಯಕ್ಕಾಗಿ ಸ್ಪರ್ಧೆ ನಡೆಯುತ್ತಿದೆ. ಒಟ್ಟಿನಲ್ಲಿ ಆಳುವ ವರ್ಗಗಳ ಬಿಕ್ಕಟ್ಟಿನ ಭಾಗವಾಗಿ ರಾಜಕೀಯ ಅಸ್ಥಿರತೆ ಮುಂದುವರಿದಿದೆ. ಸರ್ಕಾರ ಉರುಳುವ ಪರಿಸ್ಥಿತಿ ಯಾವಾಗ ಬೇಕಾದರೂ ಬರಬಹುದಾದ ಸ್ಥಿತಿ ಇದೆ.

ಮಧ್ಯಮ ವರ್ಗದ ಒಂದು ಸ್ತರದ ಜನರಿಗೆ ಬಿಜೆಪಿಯ ಅಧಿಕಾರ ಗ್ರಹಣ ಸಂಭ್ರಮಿಸುವಂತೆ ಮಾಡಿದೆ. ದಲಿತರು, ಹಿಂದುಳಿದವರು, ಪ್ರಗತಿಪರರು ಹಾಗೂ ಪ್ರಜಾತಂತ್ರವಾದಿಗಳಿಗೆ ಬಿಜೆಪಿಯ ಅಧಿಕಾರ ಗ್ರಹಣ ಆತಂಕ ಉಂಟುಮಾಡಿದೆ. ದಲಿತರು, ಹಿಂದುಳಿದವರಲ್ಲಿ ಒಂದು ಸ್ತರ ಬಿಜೆಪಿಗೆ ಮತ ನೀಡಿರುವುದು ಕೂಡ ನಡೆದಿದೆ.

ತಮಗಿರುವ ಬಹಳ ಸೀಮಿತ ಅವಕಾಶದಲ್ಲಿ ಜನರು ಆಳುವ ವರ್ಗಗಳು ಮತ್ತವುಗಳ ರಾಜಕೀಯ ಪಕ್ಷಗಳಿಗೆ ಪಾಠ ಕೂಡ ಕಲಿಸಿದ್ದಾರೆ. ಯಾವ ಪಕ್ಷಕ್ಕೂ ಬಹುಮತ ನೀಡಿಲ್ಲ. ಕಾಂಗ್ರೆಸ್, ಜೆಡಿಎಸ್‌ಗೆ ಚುರುಕು ಮುಟ್ಟಿಸಿದ್ದಾರೆ. ಸಮಾಜವಾದಿ ಪಕ್ಷಕ್ಕೆ, ಭಾಷಣಗಳಿಗೆ ಅಗ್ಗದ ಪ್ರಚಾರಕ್ಕೆ ಮಾತ್ರ ಸೀಮಿತವಾಗಿದ್ದ ಸಿಪಿಎಂ ಹಾಗೂ ವಾಟಾಳ್ ಪಕ್ಷಗಳನ್ನು ವಿಧಾನ ಸೌಧದಿಂದಲೇ ಕಿತ್ತೊಗೆದಿದ್ದಾರೆ. ಬಿ.ಎಸ್.ಪಿ, ಸರ್ವೋದಯ ಪಕ್ಷಗಳಿಗೆ ವಿಧಾನಸೌಧದ ಹತ್ತಿರಕ್ಕೂ ಸುಳಿಯದಂತೆ ಮಾಡಿದ್ದಾರೆ. ಬಿಜೆಪಿಯನ್ನು ಒಂದಷ್ಟು ಬಲಪಡಿಸಿ ಸರ್ಕಾರದಲ್ಲಿ ಕೂರುವಂತೆ ಮಾಡಿ ಕಾದು ನೋಡುವ ತಂತ್ರ ಅನುಸರಿಸಿದ್ದಾರೆ. ಸುಭಾಷ್ ಭರಣಿಯಂತಹವರಿಗೆ ಭ್ರಮೆ ಬಿಡಿಸಿದ್ದಾರೆ. ರೇವಣಸಿದ್ದಯ್ಯ, ಸಾಯಿಕುಮಾರ್ ಅಂತಹವರನ್ನು ಪಕ್ಕಕ್ಕೆ ತಳ್ಳಿದ್ದಾರೆ. ದಕ್ಷಿಣ ಕನ್ನಡದ ನಾಗರಾಜ್ ಶೆಟ್ಟಿ, ಸುನೀಲ್ ಕುಮಾರ್‌ರಿಗೆ ಮೋದಿ ಮಾದರಿ ಬೇಡ ಎಂದು ತಿಳಿಸಿದ್ದಾರೆ. ಬಂಗಾರಪ್ಪ ಮತ್ತವರ ಪುತ್ರರ ಅಹಂ ಬಿಡಿಸಿದ್ದಾರೆ. ದೇವೇಗೌಡ ಕುಟುಂಬದ ಕುತಂತ್ರ ರಾಜಕಾರಣವನ್ನು ತಿರಸ್ಕರಿಸಿದ್ದಾರೆ.

ಬಿಜೆಪಿ ಅಧಿಕಾರಕ್ಕೆ ಬಂದರೂ ಜನಸಾಮಾನ್ಯರ ಯಾವುದೇ ಮೂಲಭೂತ ಸಮಸ್ಯೆ ಬಗೆಹರಿಯುವುದಿಲ್ಲ. ಸಾಮ್ರಾಜ್ಯಶಾಹಿ ಹಾಗೂ ದಲ್ಲಾಳಿ ಬಂಡವಾಳಶಾಹಿ ಪ್ರಾಯೋಜಿತ ಎಸ್.ಇ.ಝಡ್‌ಗಳಾಗಲಿ, ಜನವಿರೋಧಿ ಅರಣ್ಯ, ಗಣಿ, ವಿದ್ಯುತ್, ನೀರು ಇತ್ಯಾದಿ ಯೋಜನೆಗಳಾಗಲಿ ನಿಲ್ಲುವುದಿಲ್ಲ. ಬದಲಿಗೆ ಮತ್ತಷ್ಟು ಹೆಚ್ಚಾಗುತ್ತವೆ. ಸಾಮ್ರಾಜ್ಯಶಾಹಿಗಳ ಹಾಗೂ ದಲ್ಲಾಳಿ ಅಧಿಕಾರಶಾಹಿ ಬಂಡವಾಳಶಾಹಿಗಳಿಗಾಗಿ ಅವರೇ ತೀರ್ಮಾನಿಸಿರುವ ಪ್ರಣಾಳಿಕೆಗಳು, ಕಾರ್ಯಸೂಚಿಗಳನ್ನು ಮಾತ್ರ ಈ ಹೊಸ ಸರ್ಕಾರ ಕೂಡ ಜಾರಿಗೆ ತರುತ್ತದೆ. ಜಾರಿಗೆ ತರಲೇಬೇಕಾಗಿದೆ. ಜನರ ಹಾಗೂ ನಾಡಿನ ಪರಿಸ್ಥಿತಿ ಮತ್ತಷ್ಟು ಅಧೋಗತಿಗೆ ಇಳಿಯುತ್ತದೆ. ಕರಾಳ ಶಾಸನಗಳು, ಫ್ಯಾಸಿಸ್ಟ್ ದಮನಕಾಂಡಗಳು ಮತ್ತಷ್ಟು ಹೆಚ್ಚುತ್ತವೆ. ಸಂಘಪರಿವಾರದ ಜನದ್ರೋಹಿ ಹಾಗೂ ದೇಶದ್ರೋಹಿ ಕುತಂತ್ರಗಳು ಮತ್ತಷ್ಟು ಹೆಚ್ಚುತ್ತವೆ. ಭೂಮಿ ದರೋಡೆ, ಗಣಿ ದರೋಡೆ, ಲೂಟಿ, ಅಕ್ರಮಗಳು ಮತ್ತೂ ಹೆಚ್ಚಾಗುತ್ತವೆ. ಈಗಾಗಲೇ ಬೆಲೆಯೇರಿಕೆ, ಆಹಾರ ವಸ್ತುಗಳ, ಗೊಬ್ಬರ, ಬಿತ್ತನೆಬೀಜಗಳ ಕೃತಕ ಅಭಾವದಿಂದ ತತ್ತರಿಸುತ್ತಿರುವ ಜನರ ಸಂಕಟದ ಗಾಯಗಳಿಗೆ ಉಪ್ಪು ಸವರುವ ಕೆಲಸ ನಡೆಯುತ್ತದೆ. ಈ ಸರ್ಕಾರ ಕುಡಿಯುವ ನೀರು, ವಸತಿ, ಶಾಲೆ, ರಸ್ತೆ, ಭೂಮಿ ಇತ್ಯಾದಿ ಜನರ ಪಾಲಿನ ಹಕ್ಕುಗಳು ಅವರಿಗೆ ಸಿಗುವಂತೆ ಮಾಡುವುದಿಲ್ಲ. ಕಾರ್ಮಿಕರು, ರೈತರು, ಸಣ್ಣ ಮಧ್ಯಮ ವ್ಯಾಪಾರಸ್ಥರು, ಸಣ್ಣ ಮಧ್ಯಮ ಉದ್ದಿಮೆಪತಿಗಳು, ವಿದ್ಯಾರ್ಥಿಗಳು, ಯುವಕರ ಸಮಸ್ಯೆಗಳು ಇವು ಯಾವುವನ್ನೂ ಬಗೆಹರಿಸುವುದಿಲ್ಲ. ಬದಲಿಗೆ ಮತ್ತಷ್ಟು ಹೆಚ್ಚಿಸುತ್ತದೆ.

ಇದೆಲ್ಲವನ್ನೂ ಅರ್ಥ ಮಾಡಿಕೊಂಡು ಎಲ್ಲಾ ಜನಸಾಮಾನ್ಯರು, ಪ್ರಗತಿಪರರು, ಪ್ರಜಾತಂತ್ರವಾದಿಗಳು ಜನರೆಲ್ಲರ ಐಕ್ಯತೆಯನ್ನು ಬಲಪಡಿಸಿ ಶಕ್ತಿಯುತ ಹೋರಾಟಗಳನ್ನು ಕಟ್ಟುತ್ತಾ ಜನತೆಯ ಪರ್ಯಾಯ ನೂತನ ಪ್ರಜಾತಾಂತ್ರಿಕ ವ್ಯವಸ್ಥೆಯ ನಿರ್ಮಾಣಕ್ಕಾಗಿ ಶ್ರಮಿಸಿ ಸಾಕಾರಗೊಳಿಸುವುದು ಜನರ ಹಾಗೂ ನಾಡಿನ ಹಿತರಕ್ಷಣೆಗೆ ಅತ್ಯಗತ್ಯವಾಗಿದೆ. ನಮ್ಮ ಪಕ್ಷವೂ ಸದಾ ಜನರೊಂದಿಗೆ ನಿಲ್ಲುತ್ತದೆ. ಅದಕ್ಕಾಗಿ ಸಂಪೂರ್ಣವಾಗಿ ಶ್ರಮಿಸುತ್ತದೆ.

**ಶುಭಾಶಯಗಳೊಂದಿಗೆ,**

**ಗಂಗಾಧರ್**
**ರಾಜ್ಯ ಸಮಿತಿ ಪರವಾಗಿ**
**ಸಿಪಿಐ (ಮಾವೋವಾದಿ)**
**ಕರ್ನಾಟಕ**

**30 ಮೇ, 2008**